ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ . DEPARTMENT / SUBJECT: ಶಿಕ್ಷಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ

ದಿನಾಂಕ : DATE : 11/03/2020

### 2007ರ ಕಾನೂನು ರದ್ದುಗೊಳಿಸಿ, ನೂತನ ವಿಧೇಯಕ ಮಂಡನೆ

# ಶಿಕ್ಷಕರ ವರ್ಗಾವಣೆ ಕಾಯಿದೆಗೆ ಒಪ್ಪಿಗೆ

11/3/2020

**ವಿಶ್ವವಾಣಿ ಸುದ್ದಿಮನೆ** ವಿಧಾನಸಭೆ

ಶಿಕ್ಷಕರ ವರ್ಗಾವಣೆ ವಿಚಾರದಲ್ಲಿ ಕೆಲ ವರ್ಷದಿಂದಿರುವ ಗೊಂದಲ ನಿವಾರಣೆಗೆಂದು ರಾಜ್ಯ ಸರಕಾರ ನೂತನ ಕಾಯಿದೆಯನ್ನು ರೂಪಿಸಿದ್ದು, ಮಂಗಳವಾರ ವಿಧಾನಸಭೆಯಲ್ಲಿ ಅನುಮೋದನೆಗೊಂಡಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್ ಕುಮಾರ್ ಮಂಗಳವಾರ 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ 2020'ವನ್ನು ಮಂಡಿಸಿದರು. ಪ್ರಮುಖವಾಗಿ ಪಾರದರ್ಶಕ ವರ್ಗಾವಣೆ, ಮೂರು ವರ್ಷದವರೆಗೆ ವರ್ಗಾವಣೆ ನೀಡದಿರುವ ಕುರಿತು, ಮ್ಯಾನ್ಯುಯೆಲ್ ಕೌನ್ಸಿಲಿಂಗ್, ವಲಯ 'ಸಿ'ನಲ್ಲಿ ಕಡ್ಡಾಯ ಸೇವೆ ಮಾಡುವ ಬಗ್ಗೆ ಈ ಕಾಯಿದೆಯಲ್ಲಿ ಪ್ರಸ್ತಾಪಿಸಲಾಗಿದ್ದು, ಇದರಿಂದ ಮುಂದಿನ ದಿನದಲ್ಲಿ ಪ್ರತಿವರ್ಷದ ವರ್ಗಾವಣೆ ಗೊಂದಲಕ್ಕೆ ತೆರೆ ಬೀಳುವ ಸಾಧ್ಯತೆಯಿದೆ.

ಈ ಹಿಂದೆ ಶಿಕ್ಷಕರ ವರ್ಗಾವಣೆ ದಂಧೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ 2007ರಲ್ಲಿ ಅಂದಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಸವರಾಜ ಹೊರಟ್ಟಿ ಅವರು ಕಾಯಿದೆಯನ್ನು ಜಾರಿಗೆ ತಂದಿದ್ದರು. ಆದರೀಗ ಈ ಕಾಯಿದೆಯನ್ನು ನಿರಸನಗೊಳಿಸಿ ನೂತನ ಕಾಯಿದೆಯನ್ನೇ ರೂಪಿಸಲಾಗಿದೆ.

**ಕಲ್ಯಾಣ ಕರ್ನಾಟಕದಲ್ಲಿ 10 ವರ್ಷ ಕಡ್ಡಾಯ:** ಮಂಗಳವಾರ ಅನುಮೋದನೆಗೊಂಡಿರುವ ಕಾಯಿದೆಯ ಪ್ರಕಾರ, ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು, ಕಲ್ಯಾಣ ಕರ್ನಾಟಕದ ಹೊರಗೆ ವರ್ಗಾವಣೆ ಪಡೆಯಲು ಕನಿಷ್ಠ 10 ವರ್ಷ ಕಾರ್ಯ ನಿರ್ವಹಿಸಬೇಕು ಎನ್ನುವ ಅಂಶವನ್ನು ಸೇರಿಸಲಾಗಿದೆ. ಇದರೊಂದಿಗೆ ಶಿಕ್ಷಕರು ಬಯಸುವ ಸ್ಥಳದಲ್ಲಿ ಖಾಲಿ ಹುದ್ದೆಯಿದ್ದರೆ ಮಾತ್ರ ಈ ವರ್ಗಾವಣೆಗೆ ಅವಕಾಶ ನೀಡಬೇಕು ಎಂದು ಸ್ಪಷ್ಟಪಡಿಸಲಾಗಿದೆ.

ಇನ್ನು ಗ್ರಾಮೀಣ ಭಾಗದಲ್ಲಿ ಕಾರ್ಯ ನಿರ್ವಹಿಸಲು ಅನೇಕ ಶಿಕ್ಷಕರು ಹಿಂದೇಟು ಹಾಕುತ್ತಿರುವುದನ್ನು ಮನಗಂಡಿರುವ ರಾಜ್ಯ ಸರಕಾರ ಇದೀಗ, ಕಡ್ಡಾಯವಾಗಿ ಮೂರು ವರ್ಷಗಳ ಕಾಲ ವಲಯ-'ಸಿ'ನಲ್ಲಿ ಕಾರ್ಯನಿರ್ವಹಿಸಬೇಕು ಎನ್ನುವ ಷರತ್ತು ಹಾಕಿದೆ. ಶಿಕ್ಷಕರಾಗಿ ನೇಮಕವಾಗುತ್ತಿದ್ದಂತೆ ಅಥವಾ ಬಡ್ತಿ ಪಡೆದ ಮೊದಲ ಸ್ಥಳವನ್ನು ವಲಯ 'ಸಿ' ಇಂದಲೇ ಆರಂಭಿಸಬೇಕು. ಒಂದು ವೇಳೆ ಈ ವಲಯದಲ್ಲಿ ಖಾಲಿಯಿಲ್ಲದಿದ್ದರೆ, ಬಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಎ ವಲಯಕ್ಕೆ ವರ್ಗಾಯಿಸಿ, ಆ ಸ್ಥಳಕ್ಕೆ 'ಸಿ' ವಲಯದ ಶಿಕ್ಷಕರನ್ನು ವರ್ಗಾಯಿಸಿ, ಆ ಸ್ಥಾನಕ್ಕೆ ಶಿಕ್ಷಕರನ್ನು ನಿಯುಕ್ತಿಗೊಳಿಸಬೇಕು ಎಂದು ಸ್ಪಷ್ಟಪಡಿಸಿದೆ.

## ಕಾಯಿದೆಯಲ್ಲಿರುವ ಪ್ರಮುಖಾಂಶ

- ಸಿ ವಲಯದಲ್ಲಿ ನಿರಂತರ 10 ವರ್ಷ ಕಾರ್ಯನಿರ್ವಹಿಸಿದ್ದರೆ ಅಂತವರನ್ನು ಬಿ ಅಥವಾ ಎ ವಲಯದ ಶಾಲೆಗೆ ನಿಯುಕ್ತಿಗೊಳಿಸುವುದು
- ಎರಡು ವರ್ಷಕ್ಕೊಮ್ಮೆ ವಿದ್ಯಾರ್ಥಿ-ಶಿಕ್ಷಕರ ಅನುಪಾತದ ಆಧಾರದಲ್ಲಿ ಮಂಜೂರಾದ ಹುದ್ದೆ ಮರುಹಂಚಿಕೆ
- ಕನಿಷ್ಠ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಕೋರಿಕೆಯ ವರ್ಗಾವಣೆಗೆ ಅವಕಾಶ
- ಮ್ಯಾನ್ಯುಯಲ್ ಕೌನ್ಸಲಿಂಗ್‌ನ್ನು ನಿಷೇಧಿಸಿರುವುದಾಗಿ ರಾಜ್ಯ ಸರಕಾರ ಸ್ಪಷ್ಟಪಡಿಸಿದ್ದು, ಒಂದು ವೇಳೆ ಆದರೆ ಅದನ್ನು ಅನೂರ್ಜಿತಗೊಳಿಸಲು ಹಾಗೂ ಇದಕ್ಕೆ ಪ್ರೋತ್ಸಾಹಿಸಿದ ಅಧಿಕಾರಿಯ ವಿರುದ್ಧ ಕಠಿಣ ಕ್ರಮ.

## ಕೋರಿಕೆ ವರ್ಗಾವಣೆಗೆ ಅರ್ಹರ್‍ಯಾರು?

- ಶಿಕ್ಷಕರ ಪತಿ / ಪತ್ನಿ / ಮಕ್ಕಳಿಗೆ ಅಂಗವೈಕಲ್ಯವಿದ್ದರೆ
- 12 ವರ್ಷದೊಳಗಿನ ಅವಲಂಬಿತ ಮಕ್ಕಳನ್ನು ಹೊಂದಿರುವ ವಿಧವೆ ಅಥವಾ ವಿಚ್ಛೇದಿತರಿಗೆ
- ರಾಜ್ಯ, ಕೇಂದ್ರ ಸರಕಾರ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪತಿ, ಪತ್ನಿಯಾಗಿರುವ ಶಿಕ್ಷಕರಿಗೆ
- 55 ವರ್ಷ ಮೀರಿದ ಶಿಕ್ಷಕ, 50 ವರ್ಷ ಮೀರಿದ ಶಿಕ್ಷಕಿಯರಿಗೆ
- ಗರ್ಭಿಣಿ ಶಿಕ್ಷಕಿ ಅಥವಾ ವರ್ಷದೊಳಗಿನ ಮಗುವಿರುವ ಶಿಕ್ಷಕಿ

## ಏಪ್ರಿಲ್-ಮೇನಲ್ಲಿ ವರ್ಗಾವಣೆ

ಶಿಕ್ಷಕರ ಮರುಹಂಚಿಕೆ, ವಲಯವಾರು ವರ್ಗಾವಣೆ ಹಾಗೂ ಕೋರಿಕೆಯ ವರ್ಗಾವಣೆಯನ್ನು ನಿಗದಿಯಂತೆ ಪ್ರತಿ ಎರಡು ವರ್ಷಕ್ಕೊಮ್ಮೆ ಆನ್ಲೈನ್ ಮೂಲಕ ಮಾಡಲು ಅವಕಾಶ ನೀಡಲಾಗಿದೆ. ಏಪ್ರಿಲ್, ಮೇ ತಿಂಗಳಲ್ಲಿ ಸಾರ್ವತ್ರಿಕ ವರ್ಗಾವಣೆಗೆ ಅವಕಾಶ ನೀಡಲಾಗಿದೆ. ವಿಶೇಷ ಸನ್ನಿವೇಶದಲ್ಲಿ ಏಪ್ರಿಲ್, ಮೇ ನಂತರವೂ ವರ್ಗಾವಣೆಗೆ ಅವಕಾಶ ನೀಡಲಾಗಿದ್ದು, ಅದನ್ನು ರಾಜ್ಯ ಸರಕಾರ ನಿರ್ದೇಶನ ಮೇರೆಗೆ ವರ್ಗಾವಣೆ ಮಾಡಬೇಕು ಎಂದು ಕಾಯಿದೆಯಲ್ಲಿ ಸ್ಪಷ್ಟಪಡಿಸಿದೆ.